**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ**
**ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆ:123/2016**

ಚಾಸಾ: 7 ಪ್ರಾಸಾ:5

| | | |
|---|---|---|
| ಹೆಸರು | : | ಡಾ.ಕವಿತಾ |
| ಗಂಡನ/ತಂದೆಯ ಹೆಸರು | : | ಡಾ. ಬಸವರಾಜು |
| ವಯಸ್ಸು | : | 52ವರ್ಷ |
| ಉದ್ಯೋಗ | : | ಹಿರಿಯ ತಜ್ಞ ವೈದ್ಯರು, ಮಿಂಟೋ ಆಸ್ಪತ್ರೆ, ಬೆಂಗಳೂರು |
| ವಾಸ | : | ಬೆಂಗಳೂರು |

**ದಿನಾಂಕ 06.01.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

ನಾನು ಜೂನ್ 2008 ರಿಂದ ಏಪ್ರಿಲ್ 2016 ರವರೆಗೆ ಸಾರ್ವಜನಿಕ ಚನ್ನಪಟ್ಟಣ ಆಸ್ಪತ್ರೆಯಲ್ಲಿ ತಜ್ಞ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:13.02.2016 ರಂದು ಮಧ್ಯರಾತ್ರಿ 12.10 ರ ಸಮಯದಲ್ಲಿ ಚಾಸಾ1 ರವರು ನಮ್ಮ ಆಸ್ಪತ್ರೆಗೆ ಬಂದು ಚಿಕಿತ್ಸೆಗೆ ದಾಖಲಾಗಿರುತ್ತಾರೆ. ಅವರಿಗೆ ಯಾವ ಘಟನೆಯಿಂದ ಪೆಟ್ಟಾಗಿರುವ ಬಗ್ಗೆ ಪ್ರಶ್ನೆ ಮಾಡಿದಾಗ ಚಾಸಾ1 ರವರು ದಿ:12.02.2016 ರಂದು ಸುಮಾರು ಸಮಯ 8.30 ಗಂಟೆಯಲ್ಲಿ ಗುಡ್ಡೆ ತಿಮ್ಮಸಂದ್ರದ ಬಳಿ ರಾಜು, ಕೃಷ್ಣ, ರವಿ, ಲಿಂಗರಾಜುರವರುಗಳು ತಮ್ಮ ಕೈಗಳಿಂದ, ಕಾಲಿನಿಂದ, ಮುಷ್ಠಿಯಿಂದ ಮತ್ತು ಇಟ್ಟಿಗೆಯಿಂದ ಹಲ್ಲೆ ಮಾಡಿರುವುದಾಗಿ ತಿಳಿಸಿರುತ್ತಾರೆ.ನಾನು ಚಾಸಾ1 ರವರನ್ನು ಪರೀಕ್ಷೆ ಮಾಡಿದಾಗ ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1.ಸುಮಾರು 1 x 0.6 ಸೆಂ. ಮೀ ಅಳತೆಯ ಮುಖದ ತರಚಿದ ಗಾಯ

2. ಎಡತೊಡೆಯ ಮೇಲೆ ನೋವಿರುತ್ತದೆ ಎಂದು ತಿಳಿಸಿರುತ್ತಾರೆ.

3. ಕುತ್ತಿಗೆಯ ಮೇಲೆ 1 x 0.2 ಸೆಂ. ಮೀ ಅಳತೆಯ 2 ತರಚಿದ ಗಾಯಗಳು,

4. ತಲೆಯ ಮೇಲೆ ನೋವಿರುತ್ತದೆ ಎಂದು ತಿಳಿಸಿರುತ್ತಾರೆ.

ಈ ಮೇಲಿನ 1 ರಿಂದ 4 ನೇ ಗಾಯಗಳು ಸಾಧಾರಣಾ ಸ್ವರೂಪದ ಗಾಯಗಳು ಮತ್ತು ತಾಜಾ ಗಾಯಗಳು ಆಗಿರುತ್ತದೆ. ದಿಃ03.03.2016 ರಂದು ಚಾಸಾ1 ರವರ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. 1 ಮತ್ತು 4ನೇ ಗಾಯಗಳು ಮು ಮಾ 1 ರಿಂದ ಹೊಡೆದರೆ ಆಗುವ ಸಾಧ್ಯತೆ ಇದೆಯೇ ಎಂದು ಪ್ರಶ್ನೆ ಮಾಡಿದಾಗ ಸಾಕ್ಷಿಯು ಆಗಬಹುದು ಎಂದು ನುಡಿಯುತ್ತಾರೆ. 2 ಮತ್ತು 3 ನೇ ಗಾಯಗಳು ಕೈಗಳು, ಕಾಲಿನಿಂದ, ಮುಷ್ಠಿಯಿಂದ ಹೊಡೆದರೆ ಆಗುವ ಸಾಧ್ಯತೆ ಇದೆಯೇ ಎಂದು ಪ್ರಶ್ನೆ ಮಾಡಿದಾಗ ಸಾಕ್ಷಿಯು ಆಗಬಹುದು ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್ ಕೆ ಆರ್ ವಕೀಲರಿಂದಃ**

ಈ ಮೇಲೆ ಹೇಳಿದ ಗಾಯಗಳು ಎಡವಿ ಬಿದ್ದಾಗ ಆಗುವ ಸಾಧ್ಯತೆ ಇದೆ ಎಂದರೆ ಇದೆ. ನಾನು ಹೇಳಿದಂತೆ ಇಟ್ಟಿಗೆಯಿಂದ ಹಲ್ಲೆ ಮಾಡಿದರೆ ಈ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆ ಎಂದರೆ ಸುಳ್ಳು. ನಾನು ಚಾಸಾ1 ರವರನ್ನು ಪರೀಕ್ಷೆ ಮಾಡಿಲ್ಲ ಮತ್ತು ಯಾವುದೇ ಗಾಯದ ಪ್ರಮಾಣ ಪತ್ರವನ್ನು ನೀಡಿಲ್ಲ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**